# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ) ರವರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು – 560 002

ಸಂಖ್ಯೆ: BBMP/Addl.Dir/JD NORTH/ LP/0024/2018-19 ದಿನಾಂಕ: 23/6/2022

## ಪ್ರಾರಂಭಿಕ ಪ್ರಮಾಣಪತ್ರ

ವಿಷಯ: ಆಸ್ತಿ ಖಾತಾ ಸಂಖ್ಯೆ: 111 (ಹಳೆ ಸಂಖ್ಯೆ: 112), ಹೊಸ ಸಂಖ್ಯೆ: 60/1 (ಸರ್ವೆ ನಂ. 60/1), ವಾರ್ಡ್ ಸಂಖ್ಯೆ: 82, ಮಹದೇವಪುರ ಗ್ರಾಮ, ಕೆ.ಆರ್.ಪುರಂ ಹೋಬಳಿ, ಬೆಂಗಳೂರು ರ ಸ್ವತ್ತಿನಲ್ಲಿ ನಿರ್ಮಿಸುತ್ತಿರುವ ವಾಣಿಜ್ಯ ಉಪಯೋಗದ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ನೀಡುವ ಬಗ್ಗೆ.

ಉಲ್ಲೇಖ: 1) ನಕ್ಷೆ ಮಂಜೂರಾತಿ ಸಂಖ್ಯೆ: BBMP/Addl.Dir/JD NORTH/ LP/0024/2018-19 ರಂತೆ ದಿನಾಂಕ: 21-03-2019.

2) ಪರಿಷ್ಕೃತ ನಕ್ಷೆ ಮಂಜೂರಾತಿ ಸಂಖ್ಯೆ: BBMP/Addl.Dir/JD NORTH/ LP/0024/2018-19 ರಂತೆ ದಿನಾಂಕ: 11-11-2021.

3) ತಮ್ಮ ಮನವಿ ಪತ್ರ ದಿನಾಂಕ:05-04-2022

* * * * * * *

ಆಸ್ತಿ ಖಾತಾ ಸಂಖ್ಯೆ: 111 (ಹಳೆ ಸಂಖ್ಯೆ: 112), ಹೊಸ ಸಂಖ್ಯೆ: 60/1 (ಸರ್ವೆ ನಂ. 60/1), ವಾರ್ಡ್ ಸಂಖ್ಯೆ: 82, ಮಹದೇವಪುರ ಗ್ರಾಮ, ಕೆ.ಆರ್.ಪುರಂ ಹೋಬಳಿ, ಬೆಂಗಳೂರು ರ ಸ್ವತ್ತಿನಲ್ಲಿ ತಳ + ನೆಲ + ಮೇಲಿನ 6 ಮತ್ತು ಭಾಗಶಃ 7, 8 ಮತ್ತು 9ನೇ ಅಂತಸ್ತುಗಳ ವಾಣಿಜ್ಯ ಕಟ್ಟಡಕ್ಕೆ ಉಲ್ಲೇಖ (1) ರಂತೆ ನಕ್ಷೆ ಮಂಜೂರಾತಿಯನ್ನು ನೀಡಲಾಗಿರುತ್ತದೆ. ತದನಂತರ, ಸದರಿ ಸ್ವತ್ತಿನಲ್ಲಿ ನಿರ್ಮಿಸುತ್ತಿರುವ 2ತಳ + ನೆಲ + ಮೇಲಿನ 9ನೇ ಅಂತಸ್ತಿನ ವಾಣಿಜ್ಯ ಉಪಯೋಗದ ಕಟ್ಟಡ ನಿರ್ಮಿಸಲು ಉಲ್ಲೇಖ (1) ರಂತೆ ಈ ಕಛೇರಿಯಿಂದ ಪರಿಷ್ಕೃತ ನಕ್ಷೆ ಮಂಜೂರಾತಿಯನ್ನು ನೀಡಲಾಗಿದ್ದು, ಆ ಸಂದರ್ಭದಲ್ಲಿ ಸದರಿ ಸ್ವತ್ತಿಗೆ ನಕ್ಷೆ ಮಂಜೂರಾತಿ ಪಡೆಯದೇ ತಳ + ನೆಲ + ಮೇಲಿನ 4 ಅಂತಸ್ತುಗಳ ಕಟ್ಟಡದ ಕಾಮಗಾರಿಯನ್ನು ನಿರ್ವಹಿಸಿರುವ ಭಾಗಕ್ಕೆ ದಂಡ ಶುಲ್ಕದೊಂದಿಗೆ ಪ್ರಾರಂಭಿಕ ಪ್ರಮಾಣಪತ್ರ ಶುಲ್ಕವನ್ನು ಪಾವತಿಸಿಕೊಳ್ಳಲಾಗಿರುತ್ತದೆ.

ಸದರಿ ಸ್ವತ್ತಿನಲ್ಲಿ ನಿರ್ಮಿಸುತ್ತಿರುವ ಕಟ್ಟಡಕ್ಕೆ ವಾಣಿಜ್ಯ ಪರಿಷ್ಕೃತ ನಕ್ಷೆ ಮಂಜೂರಾತಿ ನೀಡುವ ಸಮಯದಲ್ಲಿ ದಂಡ ಶುಲ್ಕ ಮತ್ತು ಪ್ರಾರಂಭಿಕ ಪ್ರಮಾಣಪತ್ರ ಶುಲ್ಕವನ್ನು ಪಾವತಿಸಿಕೊಂಡಿರುವುದರಿಂದ, ಪ್ರಾರಂಭಿಕ ಪ್ರಮಾಣಪತ್ರ ನೀಡಲು ಉಲ್ಲೇಖ (2) ರಲ್ಲಿ ಕೋರಿದ್ದು, ಸದರಿ ಪ್ರಸ್ತಾವನೆಗೆ ಅಪರ ನಿರ್ದೇಶಕರು (ನಗರ ಯೋಜನೆ) ರವರು ದಿನಾಂಕ: 02-06-2022 ರಂದು ಅನುಮೋದನೆಯನ್ನು ನೀಡಿರುತ್ತಾರೆ.

ಸದರಿ ವಾಣಿಜ್ಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ನೀಡುವ ಸಂಬಂಧ ದಂಡ ಶುಲ್ಕ ಪ್ರಾರಂಭಿಕ ಪ್ರಮಾಣಪತ್ರ ಶುಲ್ಕ ರೂ. 16,43,584/- ಗಳೊಂದಿಗೆ ಪರಿಷ್ಕೃತ ನಕ್ಷೆ ಮಂಜೂರಾತಿ ಸಂಬಂಧ ವಿಧಿಸಿರುವ ಶುಲ್ಕಗಳ ಮೊತ್ತಕ್ಕೆ ಡಿ.ಡಿಯನ್ನು ಸಲ್ಲಿಸಿ ಈ ಕಛೇರಿಯ ರಶೀದಿ ಸಂಖ್ಯೆ: RE-ifms 331-TP/000076 ದಿನಾಂಕ: 08-09-2021 ರಂದು ಸಂದಾಯ ಮಾಡಿರುವುದರಿಂದ, ಸದರಿ ವಾಣಿಜ್ಯ ಕಟ್ಟಡಕ್ಕೆ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಪ್ರಾರಂಭಿಕ ಪ್ರಮಾಣಪತ್ರವನ್ನು ನೀಡಲಾಗಿದೆ.

**ಷರತ್ತುಗಳು**

1. ಕಟ್ಟಡದ ಕಾಮಗಾರಿಯನ್ನು ಮಂಜೂರಾತಿ ಪರಿಷ್ಕೃತ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು.

true copy 24/06/22

23/06/2022

ಜಂಟಿ ನಿರ್ದೇಶಕರು (ನಗರ ಯೋಜನೆ –ಉತ್ತರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

18/06/22 18/6/22 22/6/22

2. ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ-ಪಕ್ಕದವರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ, ವಾಹನ ಸಂಚಾರಕ್ಕೆ ಅಡಚಣೆಯಾಗದಂತೆ, ಅಪಘಾತ ಆಗದಂತೆ ಕಟ್ಟಡ ನಿರ್ಮಾಣ ಕೈಗೊಳ್ಳುವುದು ಹಾಗೂ ಕೆಲಸಗಾರರಿಗಾಗಿ ಶೆಡ್ ಮತ್ತು ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.
3. ಪರಿಷ್ಕೃತ ಮಂಜೂರಾತಿಯ ಸಿಂಧುತ್ವವು ಉಲ್ಲೇಖ (2) ರಂತೆ ಅನುಮೋದನೆ ನೀಡಿದ ದಿನಾಂಕದಿಂದ 5 ವರ್ಷಗಳ ಅವಧಿಗೆ ಮಾನ್ಯತೆ ಹೊಂದಿದ್ದು, ಈ ಅವಧಿಯೊಳಗೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಿ ಸ್ವಾಧೀನಾನುಭವ ಪ್ರಮಾಣಪತ್ರವನ್ನು ಪಡೆಯತಕ್ಕದ್ದು.
4. ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಇಂಜಿನಿಯರಿಂಗ್ ಉಪ-ವಿಭಾಗಕ್ಕೆ ಮಾಹಿತಿಯನ್ನು ನೀಡಿ ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.
5. ನಿವೇಶನದ ಖಾತಾ ವಿಭಜನೆ, ದಾಖಲಾತಿಗಳನ್ನು / ಸ್ವತ್ತಿನ ಹಕ್ಕನ್ನು ಬದಲಾಯಿಸಿದಲ್ಲಿ ಮತ್ತು ಯಾವುದೇ ರೀತಿ ದಾಖಲಾತಿಗಳನ್ನು ಅಥವಾ ವಾಸ್ತವಾಂಶ ಮರೆಮಾಚಿದಲ್ಲಿ ಅರ್ಜಿದಾರರು ನೇರ ಹೊಣೆಯಾಗಿರುತ್ತಾರೆ ತಪ್ಪಿದ್ದಲ್ಲಿ ನೀಡಲಾದ ಕಟ್ಟಡ ನಕ್ಷೆ ಮಂಜೂರಾತಿಯು ತನ್ನಿಂದತಾನೇ ರದ್ದುಗೊಳ್ಳುತ್ತದೆ.
6. ಅರ್ಜಿದಾರರು/ಮಾಲೀಕರು/ಡೆವಲಪರ್‌ಗಳು ಕಟ್ಟಡ ನಿರ್ಮಾಣ ಮತ್ತು ಕಟ್ಟಡ ತೆರವಿನ ತ್ಯಾಜ್ಯದ ನಿರ್ವಹಣೆ ಮತ್ತು ವಿಲೇವಾರಿಯನ್ನು ಮಾಡಲು ಘನತ್ಯಾಜ್ಯ ನಿರ್ವಹಣೆ (ಎಸ್.ಡಬ್ಲ್ಯೂ.ಎಂ) ಉಪನಿಯಮ 2016 ಕ್ಕೆ ಬದ್ಧವಾಗಿರತಕ್ಕದ್ದು.
7. ಕಟ್ಟಡದಲ್ಲಿ ಉತ್ಪತ್ತಿಯಾಗುವ ಘನ ತ್ಯಾಜ್ಯವನ್ನು ಸಂಪೂರ್ಣವಾಗಿ ಸಂಸ್ಕರಿಸಿ ಬಳಸಿಕೊಳ್ಳುವಂತಹ ಸಂಸ್ಕರಣಾ ಘಟಕವನ್ನು ಸ್ಥಾಪಿಸಿ ಅದನ್ನು ನಿರ್ವಹಿಸುವ ಮುಖಾಂತರ Zero Waste Discharge ಮಾಡಲು ಕ್ರಮಕೈಗೊಳ್ಳುವುದು.
8. ಅರ್ಜಿದಾರರು/ಮಾಲೀಕರು/ಡೆವಲಪರ್‌ಗಳು ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್ ಪಾಯಿಂಟ್‌ಗಳನ್ನು ಅಳವಡಿಸಲು ಅಗತ್ಯ ಕ್ರಮವಹಿಸುವುದು.
9. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಸಂಸ್ಕರಿಸಿದ (Treated Water Utilisation for Construction) ನೀರನ್ನು ಕಟ್ಟಡ ನಿರ್ಮಾಣ ಕಾರ್ಯಕ್ಕೆ ಕಡ್ಡಾಯವಾಗಿ ಬಳಸಿಕೊಳ್ಳುವುದು.
10. Levy and Surcharge ಗೆ ಸಂಬಂಧಿಸಿದಂತೆ ಘನ ಉಚ್ಛ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 11928/2021 (ಎಲ್‌ಬಿ-ಬಿಎಂಪಿ) ಗೆ ದಿನಾಂಕ: 13-07-2021 ರ ಅಂತಿಮ ಆದೇಶಕ್ಕೆ ಒಪ್ಪಿ ಸಲ್ಲಿಸಿರುವ ಮುಚ್ಚಳಿಕೆ ಪತ್ರಕ್ಕೆ ಬದ್ಧರಾಗಿರತಕ್ಕದ್ದು

ಸಹಿ /-

**ಜಂಟಿ ನಿರ್ದೇಶಕರು (ನಗರ ಯೋಜನೆ -ಉತ್ತರ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

ಗೆ,

M/s. MFAR Developers Pvt Ltd., GPA Holder
Sri. Chartrabhuj Basarmal Pardhanani Khatha Holder,
# 111 (ಹಳೆ ಸಂಖ್ಯೆ: 112), ಹೊಸ ಸಂಖ್ಯೆ: 60/1,
ಕೆ.ಆರ್.ಪುರಂ ಹೋಬಳಿ, ಬೆಂಗಳೂರು

ಪ್ರತಿಯನ್ನು:

1. ಕಾರ್ಯಪಾಲಕ ಅಭಿಯಂತರರು (ಮಹದೇವಪುರ ವಿಭಾಗ), ಸಹಾಯಕ ಕಾರ್ಯಪಾಲಕ ಅಭಿಯಂತರರು, (ಹೂಡಿ ಉಪ-ವಿಭಾಗ) ರವರಿಗೆ ಮಾಹಿತಿಗಾಗಿ ಮತ್ತು ಕ್ರಮಕ್ಕಾಗಿ.
2. ಕಛೇರಿ ಪ್ರತಿ.

Received 23/06/22

23/06/2022

**ಜಂಟಿ ನಿರ್ದೇಶಕರು (ನಗರ ಯೋಜನೆ -ಉತ್ತರ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

18/06/22 18/6/22 22/6/22